ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ, ಬೆಂಗಳೂರು
Rajiv Gandhi University of Health Sciences, Karnataka, Bangalore
4th T Block, Jayanagar, Bangalore – 560 041

RGU/REG/SWF-SSP/E-124708/2025-26 28.11.2025

# ಅತಿ ಜರೂರು

# ಸುತ್ತೋಲೆ

ಭಾರತದ ಗೌರವಾನ್ವಿತ ಸುಪ್ರೀಂ ಕೋರ್ಟ್ ಮಾರ್ಚ್ 24, 2025 ರಂದು ಕ್ರಿಮಿನಲ್ ಮೇಲ್ಮನವಿ ಸಂಖ್ಯೆ 1425/2025 ಕ್ಕೆ ಸಂಬಂಧಿಸಿದ ತೀರ್ಪಿನಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ (HEIs) ಹೆಚ್ಚುತ್ತಿರುವ ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳನ್ನು ಪರಿಹರಿಸಲು ರಾಷ್ಟ್ರೀಯ ಕಾರ್ಯಪಡೆಯನ್ನು ರಚಿಸಿದೆ. ಸದರಿ ಕಾರ್ಯಪಡೆಯ ವೆಬ್‌ಸೈಟ್ ಮೂಲಕ https://ntf.education.gov.in/ ಉನ್ನತ ಶಿಕ್ಷಣ ಸಂಸ್ಥೆಗಳು, ಅಧ್ಯಾಪಕರು, ಮಾನಸಿಕ ಆರೋಗ್ಯ ವೃತ್ತಿಪರರು, ಪೋಷಕರು ಹಾಗೂ ಸಾರ್ವಜನಿಕರ ಪ್ರತಿಕ್ರಿಯೆಗಳನ್ನು ಪಡೆಯುತ್ತಿದೆ.

ಈ ಸಂಬಂಧ ಕರ್ನಾಟಕದ ಸರ್ಕಾರಿ ವಿಶ್ವವಿದ್ಯಾಲಯಗಳು, ಖಾಸಗಿ ವಿಶ್ವವಿದ್ಯಾಲಯಗಳು, ಡೀಮ್ಡ್-ಟು-ಬಿ ವಿಶ್ವವಿದ್ಯಾಲಯಗಳು ಮತ್ತು ಸರ್ಕಾರಿ ವಿಶ್ವವಿದ್ಯಾಲಯಗಳಿಗೆ ಸಂಯೋಜಿತವಾಗಿರುವ ಸರ್ಕಾರಿ/ಖಾಸಗಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳನ್ನು ಪರಿಹರಿಸಲು ಪ್ರತಿ ಕಾಲೇಜಿನಿಂದಲೂ ಒಬ್ಬರು ನೋಡಲ್ ಆಫೀಸರ್‌ನ್ನು ನೇಮಕ ಮಾಡಲು ವಿಶ್ವವಿದ್ಯಾಲಯದ ವತಿಯಿಂದ ಕುಲಪತಿಗಳ ಅಧ್ಯಕ್ಷತೆಯಲ್ಲಿ ಆನ್‌ಲೈನ್ ಸಭೆಯನ್ನು ಈಗಾಗಲೇ ನಡೆಸಲಾಗಿದೆ. ಸದರಿ ಸಭೆಗೆ ಹಾಜರಾದ ಎಲ್ಲಾ ಕಾಲೇಜುಗಳ ಮುಖ್ಯಸ್ಥರು ಕಡ್ಡಾಯವಾಗಿ ರಾಷ್ಟ್ರೀಯ ಕಾರ್ಯಪಡೆಯ ಸರ್ವೆ ಫಾರಂ ನ್ನು ಈ ವೆಬ್‌ಸೈಟ್ https://ntf.education.gov.in/ ನಲ್ಲಿ ನೊಂದಣಿ ಮಾಡಿಕೊಳ್ಳಬೇಕಾಗಿರುತ್ತದೆಯೆಂದು ಸೂಚಿಸಲಾಗಿದೆ. ತದನಂತರ ಈ ಗೂಗಲ್ ಫಾರಂ ನ್ನು ( https://forms.gle/Cp3pqFJgjihfcu9s7 ) ಭರ್ತಿ ಮಾಡಿ ದಿನಾಂಕ: 06/12/2025 ರ ಸಂಜೆ 5.30 ಗಂಟೆಯೊಳಗೆ ತುರ್ತಾಗಿ ಕಳುಹಿಸಬೇಕಾಗಿ ಸೂಚಿಸಲಾಗಿದೆ.

Digitally signed by
ARJUN SHETTYHALLI ODEYAR
Date: 28-11-2025 14:22:41

ಕುಲಸಚಿವರು
ರಾ.ಗಾ.ಆ.ವಿ.ವಿ. ಬೆಂಗಳೂರು

ಗೆ

ಪ್ರಾಂಶುಪಾಲರು,
ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಎಲ್ಲಾ ಸಂಯೋಜಿತ ಕಾಲೇಜುಗಳು